# ಟಿಕೆಟ್ ರಹಿತ ಪ್ರಯಾಣ: 8,891 ಮಂದಿಗೆ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಮೂರು ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 8,891 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ 57,219 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 8,891 ಮಂದಿಯಿಂದ ₹17.96 ಲಕ್ಷ ದಂಡ ವಸೂಲಿ ಮಾಡಲಾಗಿದೆ. ಕರ್ತವ್ಯಲೋಪ ಎಸಗಿದ ಕಾರಣಕ್ಕಾಗಿ ಸಂಸ್ಥೆಯ 5,268 ನಿರ್ವಾಹಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ 1,178 ಪುರುಷರಿಗೆ ₹1,17,800 ದಂಡ ವಿಧಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.




ಡೆಕ್ಕನ್ ಹೆರಾಲ್ಡ್ ಇನ್ ಎಜುಕೇಶನ್ (ಡಿ.ಎಚ್.ಐ.ಇ) ಸರ್ಕಾರಿ ನೌಕರರ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಸ್ಪೆಲ್ ಬೀ' ಅಂತರಶಾಲಾ ಸ್ಪರ್ಧೆಯಲ್ಲಿ ವಿಜೇತರಾದ (ನಿಂತವರು ಎಡದಿಂದ–ಹಿರಿಯರ ವಿಭಾಗ) ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆಯ ಸಿದ್ಧಾರ್ಥ ಮುತ್ತಪ್ಪ (ಪ್ರಥಮ), ಎನ್‌ಪಿಎಸ್ ಕೋರಮಂಗಲದ ಸುಯಶ್ ಮಂಬಾಲಿ (ದ್ವಿತೀಯ), ವೇದಾರ್ಥ ದೀಪಕ್ ಸಾವಂತ್ (ತೃತೀಯ), (ಕುಳಿತವರು ಎಡದಿಂದ–ಕಿರಿಯರ ವಿಭಾಗ) ಯಶವಂತಪುರದ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಧೃತಿ ಮಧುಕರ್, (ಪ್ರಥಮ), ಅರ್ಹಮ್ ಸಿದ್ದಿಕಿ (ದ್ವಿತೀಯ ಸ್ಥಾನ), ಸೇಂಟ್ ಜೋಸೆಫ್ಸ್ ಬಾಲಕರ ಪ್ರೌಢಶಾಲೆಯ ಇವಾನ್ ಝೇವಿಯರ್ (ತೃತೀಯ ಸ್ಥಾನ) ಅವರಿಗೆ ಪ್ರಮಾಣಪತ್ರ ವಿತರಿಸಲಾಯಿತು. ಕ್ವಿಜ್ ಮಾಸ್ಟರ್ ಪ್ರೊ. ಅರುಲ್ ಮಣಿ ಉಪಸ್ಥಿತರಿದ್ದರು

– ಪ್ರಜಾವಾಣಿ ಚಿತ್ರ